ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು

ದಿನಾಂಕಃ **08.01.2025**

ಸಿ.ಸಿ.ನಂ.**285/2020**

ಪಿರ್ಯಾದುದಾರರು : ಶ್ರೀಮತಿ ಸಜೀಲಾ

ವಿರುದ್ಧ

ಆರೋಪಿತರು: 1. ಶ್ರೀಮತಿ ದಿಲಾದ್
2. ಅಬ್ದುಲ್ ರಶೀದ್
3. ಅಲಿಮುಲ್ಲಾ

<u>ದೋ ಷಾ ರೋ ಪ ಣೆ</u>

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ಸಿ.ವೀರಭದ್ರಯ್ಯ ಎಂ.ಎ., ಎಲ್‌ಎಲ್.ಬಿ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ಆರೋಪಣೆ ಏನೆಂದರೆಃ

ಫಿರ್ಯಾದುದಾರರ ತಾಯಿಯಾದ ದಿಲ್ಶಾದ್ ರವರಿಗೆ ದಿನಾಂಕ **23.05.1987** ರಂದು ಸರ್ಕಾರಿದಿಂದ **50 X 30** ಅಳತೆಯ ನಿವೇಶನ ಹಕ್ಕು ಪತ್ರದ ಮುಖಾಂತರ ಮಂಜೂರಾಗಿದ್ದು , ಸದರಿ ದಿಲ್ಶಾದ್ ರವರು ಮತ್ತು ಫಿರ್ಯಾದುದಾರರ ತಂದೆ ಅಬ್ದುಲ್ ರಶೀದ್ ರವರು ಮರಣ ಹೊದಿದ್ದು , **1** ಮತ್ತು **2** ನೇ ಆರೋಪಿತರಾದ ನೀವುಗಳು **3** ನೇ ಆರೋಪಿತರ ಸಹಾಯದಿಂದ ಫಿರ್ಯಾದುದಾರರ ತಾಯಿಗೆ ಮಂಜೂರಾದ ನಿವೇಶನವನ್ನು ಕಬಳಿಸುವ

ಸಲುವಾಗಿ ಅಪ್ರಮಾಣಿಕತನದಿಂದ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿ 2 ನೇ ಆರೋಪಿಯಾದ ನಿಮ್ಮ ಹೆಸರನ್ನು ಬಶೀರ್ ಸಾಬ್ ಯಾನೆ ಅಬ್ದುಲ್ ರಶೀದ್ ಎಂದೂ ನಿಮ್ಮ ಪತ್ನಿ ಯಾದ 1 ನೇ ಆರೋಪಿಯಾದ ನಿಮಗೆ ಮೇಲೆ ಹೇಳಲಾದ ಸದರಿ ಸ್ವತ್ತು ಮಂಜೂರಾಗಿದೆಯೆಂದು ದಾಖಲೆಯನ್ನು ಸೃಷ್ಟಿ ಮಾಡಿಕೊಂದು 1 ನೇ ಆರೋಪಿಯ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಕೊಂಡು ಫಿರ್ಯಾದುದಾರರಿಗೆ ವಂಚನೆ ಮಾಡಿದ್ದು ಮತ್ತು ಅವುಗಳನ್ನು ನೈಜ ದಾಖಲೆಗಳೆಂದು ಮೋಸದಿಂದ ಸುಳ್ಳು ಸೃಷ್ಟನೆ ಮಾಡಿ, ಸದರಿ ದಾಖಲೆಗಳು ಸುಳ್ಳು ಸೃಷ್ಟನೆ ಮಾಡಿದ ದಾಖಲೆಗಳು ಎಂದು ತಿಳಿದಿದ್ದರೂ ಅವುಗಳನ್ನು ನೈಜ ದಾಖಲೆಗಳೆಂದು ಉಪಯೋಗಿಸಲು ಇಟ್ಟುಕೊಂಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.420 , 464 , 465, 471, 474 ಸಹ ಕಲಂ 34 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂಃ

ತದನಂತರ ಆರೋಪಿತರಾದ ನೀವುಗಳು ಫಿರ್ಯಾದುದಾರರ ತಾಯಿಗೆ ಮಂಜೂರಾದ ನಿವೇಶನದ ಸ್ವಾಧೀನವನ್ನು ಪಡೆದುಕೊಂಡು ಅದನ್ನು ಮಾರಾಟ ಮಾಡಿ ಅಕ್ರಮವಾಗಿ ಲಾಭವನ್ನು ಪಡೆಯುವ ಸಲುವಾಗಿ ದಿನಾಂಕ 5.7.2015 ರಂದು ಸಂಜೆ 6 ಗಂಟೆಯ ಸಮಯದಲ್ಲಿ ನಿಮ್ಮ ಪೈಕಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸದರಿ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡು ಫಿರ್ಯಾದುದಾರರನ್ನು ಅಕ್ರಮವಾಗಿ ಸದರಿ ಸ್ವತ್ತಿನ ಸ್ವಾಧೀನತೆಯಿಂದ ಹೊರ ಹಾಕಲು ಪ್ರಯತ್ನಿಸಿ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆಯನ್ನು ಒಡ್ಡಿದ್ದು ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.506 ಸಹ ಕಲಂ 34 ರ

ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ಆರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

**sd**

( ಸಿ.ವೀರಭದ್ರಯ್ಯ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ ಚಿಕ್ಕಮಗಳೂರು